21. ಗ್ರಾಮಾಂತರಗಳ ಆರೋಗ್ಯಸ್ಥಿತಿ ಮತು. ಇತರ ಕಾಮುಗಾರಿಗೋಸ್ಕರವಾಗಿ ಡಿಸ್ಟ್ರಿಕ್ಟು ಫಂಡ್ ಹಣದಿಂದ 8,000 ರೂಪಾಯಿಗಳನ್ನು ಮಂಜೂರ್ಮಾಡತಕ್ಕ ವಿಷಯವಾಗಿ ಕೆಲವು ಸಂಗತಿಗಳನ್ನು ತಿಳಿಸಬೇಕೆಂತ 1908ನೆ ನವಂಬರ 4ನೆ ತಾರೀಖಿನ 4179—ಲೋ. ಬೋ. 82-08-3ನೆ ಗವರ್ನಮೆಂಟ್ ಪ್ರೊಸೀಡಿಂಗ್ಸು ಓದಲಾಗಿ ದುರ್ಭಿಕ್ಷಕಾಲದಿಂದ ಕಂದಾಯವನ್ನು ಕಡಿವೇ ಮಾಡುವ ಸಂದರ್ಭವಿರುವದರಿಂದ ಪ್ರೆಸಿಡೆಂಟರವರಿಂದ ತೋರಿಸಲ್ಪಟ್ಟ ಹೆಚ್ಚಿಗೆ ತಿಳಿಸಿಂದ 6,100 ರೂಪಾಯಿಯನ್ನು ಸ್ಯಾಂಕ್ಷನ್ ಮಾಡುವದಕ್ಕೆ ಗವರ್ನಮೆಂಟಿನವರನ್ನು ಕೇಳಿಕೊಳ್ಳಬೇಕೆಂತಲೂ ತಾಲ್ಲೂಕುಗಳಿಂದ ಕಳುಹಿಸಿರುವ ಅಂದಾಜಾಗಳನ್ನು ಸ್ಯಾಂಕ್ಷನ್ ಖಚ್ಚು ಗವರ್ನಮೆಂಟಿಗೆ ಕಳುಹಿಸಬೇಕೆಂತಲೂ ಇದೇ ಮೊಬಲಗಿನಿಂದ ಇನ್ ಕಂಪ್ಲೀಟ್ ಕೆಲಸಗಳಿಗೆ ಮೊಬಲಗು ಕೊಡಬೇಕೆಂತಲೂ ತೀರ್ಮಾನಿಸಲಾಯಿತು.

22. ಶಿಕಾರಿಪುರ ತಾಲ್ಲೂಕು ತಿರಳಿಕೊಪ್ಪದ ಯೂನಿಯರ್ಜನಲ್ಲಿರುವ 4 ಗಂಡು ಝೂಡಮಾಲಿಗಳಿಗೆ ಸಂಬಳ ಜಾಸ್ತಿ ಮಾಡತಕ್ಕ ವಿಷಯದಲ್ಲಿ ತಿರಸ್ಕಾರ ಮಾಡಿರುವ ನಂಬರು 4796—ಲೋ. ಬೋ. 140-08-2ನೆ ಮುರ್ತುಂ 21-11-08ನ ಗವರ್ನಮೆಂಟ್ ಪ್ರೊಸೀಡಿಂಗ್ಸು ಓದಲಾಗಿ, ಸದ್ಯಕ್ಕೆ ಗ್ರೇಡ್ ಅಲೋವೆನ್ಸು ಸದರಿ ಝೂಡುಮಾಲಿಗಳಿಗೆ ಕೊಡೋಣದರಿಂದಲೂ ಸ್ಥಳಿಕರು ಝೂಡಮಾಲಿ ಕೆಲಸ ಮಾಡುವದಕ್ಕೆ ತಿರಸ್ಕರಿಸುತ್ತಾರೆಂತಲೂ, ಕೆಲಸ ಮಾಡತಕ್ಕವರನ್ನು ಬೇರೆ ಸ್ಥಳದಿಂದ ಕರೆಸಬೇಕೆಂತಲೂ ತಾಲ್ಲೂಕು ಅಮಲ್ದಾರರು ಹೇಳುವದರಿಂದ ಮುಂದಿನ ವರುಷದ ಬಜ್ಜೆಟ್ಟಿನಲ್ಲಿ ರಿಪೋರ್ಟು ಮಾಡಬೇಕೆಂತಲೂ ತೀರ್ಮಾನಿಸಲಾಯಿತು.

23. ಶ್ರೀವರ್ಮ ಮಹಾರಾಜ್ಞೆಯವರ ಪ್ರಸಿದ್ಧಪತ್ರಿಕೆಯ 50ನೆ ವರುಷ ವರ್ಧಂತಿಯ ದಿನ ಖರ್ಚಿಗೋಸ್ಕರ ಡಿಸ್ಟ್ರಿಕ್ಟು ಫಂಡಿನಿಂದ ಈಟ್ರಬ್ಯೂಷ್ ಕೊಡುವ ವಿಷಯದಲ್ಲಿ ಡಿಸ್ಟ್ರಿಕ್ಟು ಬೋರ್ಡಿನ ತೀರ್ಮಾನವನ್ನು ತಿಳಿಸಬೇಕೆಂತ ತಲ್ಪಿದ ನಂಬರು 4919-26—ಲೋ. ಬೋ. 117-08ನೆ ಮುರ್ತುಂ 25—11—08ನೆ ಗವರ್ನಮೆಂಟ್ ಪ್ರೊಸೀಡಿಂಗ್ಸು ಓದಲಾಗಿ ಸದರಿ ಖರ್ಚನ್ನು ಕೊಡುವದಕ್ಕೆ ಬೋರ್ಡಿನವರು ಒಪ್ಪಿಕೊಂಡಿರುವದಾಗಿ ತೀರ್ಮಾನಿಸಲಾಯಿತು.

24. 1908ನೆ ಇಸವಿ ನವಂಬರು ತಾರೀಖು 15 ರಿಂದ ಗೆರಸೊಪ್ಪಾ ಜಲಪಾತಕ್ಕೆ ಹೋಗತಕ್ಕ ನದಿಯನ್ನು ಡಿಸ್ಟ್ರಿಕ್ಟು ಬೋರ್ಡು ಸ್ವಾಧೀನ ಇಟ್ಟುಕೊಳ್ಳುವದಕ್ಕೂ ಮತು. ಅಲ್ಲಿರುವ ರಸ್ತೆ ರಿಪೇರಿ ಮುಂತಾದ ಖರ್ಚುಗಳಿಗೆ ಪ್ರೊವಿಷಿಯಲ್ ಫಂಡಿನಿಂದ ಹಣ ವದಗಿಸತಕ್ಕ ವಿಷಯದಲ್ಲಿ ತಲ್ಪಿದ ನಂಬರು 5131-40—ಲೋ. ಬೋ. 343-07-4ನೆ ಮುರ್ತುಂ 30—11—08ನ ಗವರ್ನಮೆಂಟ್ ಪ್ರೊಸೀಡಿಂಗ್ಸು ಓದಲ್ಪಟ್ಟು ರಿಕಾರ್ಡು ಮಾಡಲಾಯಿತು.

25. ಪ್ರೆಸಿಡೆಂಟರವರ ಆಫೀಸಿನಲ್ಲಿ 1908ನೆ ಸಾಲಿನ ಹೆಲ್ತ್ ಆಲ್ಮನಕ್‌ನ ಬಂದು ಪ್ರತಿಯನ್ನು ರಿಕಾರ್ಡಿನಲ್ಲಿಡುವದಕ್ಕೆ ಕಳುಹಿಸಿರುತ್ತೆಂತ ತಲ್ಪಿದ ಸ್ಯಾನಿಟೆರಿ ಕಮಿಷನರವರ ನಂಬರು 2000 ಮುರ್ತುಂ 18—11—08ನೆ ಡಾಕೆಟ್ ಓದಲಾಗಿ, ರಿಕಾರ್ಡು ಮಾಡಲಾಯಿತು, ಮತ್ತು ಈ ವರುಷವಾಗುತ್ತಾ ಬಂದದ್ದರಿಂದ ಸದರಿ ಪ್ರತಿಗಳು ಅವಶ್ಯಕವಿಲ್ಲವೆಂತ ತೀರ್ಮಾನಿಸಲಾಯಿತು.

ಕೆ. ಚಾಂಡಿ, ಪ್ರೆಸಿಡೆಂಟ್.

ಕಡೂರು ಡಿಸ್ಟ್ರಿಕ್ಟು.

ಸ್ಥಿರಸ್ವತ್ತಿನ ಹರಾಜ್ ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

ತಾರೀಖು 4ನೆ ಜನವರಿ 1909.

1. ಕಂದಾಯದ ಬಾಕೀದಾರರಾದ ಬಾಳೂರು ಗ್ರಾಮದ ಪುಂಕಾಲು ಸರಸ್ವತಮ್ಮನಿಂದ ಬರಬೇಕಾದ ಜಮೀ ಕಂದಾಯದ ಬಾಕೀಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಕಡೂರು ಡಿಸ್ಟ್ರಿಕ್ಟು ಮೂಡಿಗೆರೆ ತಾಲ್ಲೂಕು ಬಾಳೂರು ಗ್ರಾಮದಲ್ಲಿ 1909ನೆ ಫೆಬ್ರವರಿ 6ನೆ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

ಹರಾಜು ಆ ದಿವಸ ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಬಾಕಿ ತಪಶೀಲನ್ನು 1909ನೆ ಇಸವಿ ಜನವರಿ 14ನೆ ಮುರ್ತುಂ ಮೈಸೂರ್ ಗೆಜೆಟಿನ 2ನೆ ಭಾಗದ 22ನೆ ನಂಬರ್ ಪೇಜಿನಿಂದ ತಿಳಿಯಬೇಕು.

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರರ ಹೆಸರು.	ಸ್ವತ್ತಿನ ತಪ್ಶೀಲ್. ಕಟ್ಟಡಗಳು. ಹೆಸರು.	ಅಂದಾಜು ಕಿಮ್ಮತ್ತು.	ಜಮೀನು. ನಂಬರ್ ಅಫೀನಾ ಜಮೀನಿನ ಹೆಸರು	ಖುಷ್ಕಿ ತರಿ ಅಫೀನಾ ಬಾಗಾಯತು.	ವಿಸ್ತೀರ್ಣ. ಎ.	ಗು.	ಅಕಾರ. ರೂ.	ಆ.	ಅಂದಾಜು ಕಿಮ್ಮತ್ತು. ರೂ	ಸರ್ಕಾರಕ್ಕೆ ಸಾಲಿಯಾನಾ ಕೊಡಬೇಕಾದ ಜಪ್ತೀಕಾದ ಜೋಡಿ ಯಾ ಕಾಯಂ ಗುತ್ತಾ ಪೊಲಬುಗಳು. ರೂ.	ಸರ್ಕಾರಕ್ಕೆ ಬರಬೇಕಾದ ನೋಟೀಸು ಜಾರಿ ಮಾಡಿದ ಖರ್ಚು ಸಹಿತವಾದ ಬಾಕಿ ಪೊಲಬುಗಳು. ರೂ.	ಆ.	ಪೈ.
ಮೂಡಿಗೆರೆ	ಬಾಳೂರು	ಬಾಳೂರು	ಪುಂಕಾಲು ಸರಸ್ವತಮ್ಮನ್ನು ಕೋಂ ಗಣೇಶರಾವ್	ಸರ್ವೆ ನಂ. 27—ಪಶ್ಚಿಮದಲ್ಲಿ ಮುತ್ತಿ ಸರ್ವೆ ನಂ. 27—ಪೂರ್ವದಲ್ಲಿ ಮುತ್ತಿ ಅಂದಾಜು ರೂ. 211				ಎ.	ಗು.	ರೂ.	ಆ.					
						25	ಕಾಫಿ ...	6	29	6	8	60			64	3	6	ಐಗ
						26	ಖುಷ್ಕಿ ...	0	14	0	4	1			1	8	0	ನೊ
						27	ಕಾಫಿ ...	0	37	1	0	10						
						28	ಡಿಟೋ ...	1	6	1	12	20	...		65	11	6	
						29-2	ಡಿಟೋ ...	7	9	7	4	75			ಹರಾಜು ಜೇಟಿನ ವರಿಗಿನ ಬಡ್ಡಿ ಬರಬೇಕು.			
						32	ತರಿ ...	1	37	4	8	5						
						33	ಡಿಟೋ ...	0	25	1	8	2						
						34	ಕಾಫಿ ...	30	30	31	0	320						
						8	ನಂಬರುಗಳು	49	27	53	12							

ಸಿ. ರಂಗನಾಥರಾವ್ ಸಾಹಿಬ್, ಫಾರ್ ಡೆಪ್ಯುಟಿ ಕವಿಾಷನರ್.

ಚಿತ್ರದುರ್ಗ ಡಿಸ್ಟ್ರಿಕ್ಟು.

ಇಸ್ತಿಹಾರ್.

ತಾರೀಖು 23ನೆ ಜನವರಿ 1909.

ಚಿತ್ರದುರ್ಗ ಡಿಸ್ಟ್ರಿಕ್ಟಿನ ಸಬ್ ರಿಜಿಸ್ಟ್ರಿ ಆಫೀಸುಗಳಲ್ಲಿ ಈ ಕೆಳಗೆ ನಮೂದಿಸಿರುವ ದಸ್ತಾವೇಜುಗಳು ಎರಡು ವರ್ಷಗಳಿಗೆ ಮೇಲ್ಪಟ್ಟು ಜೀವಾರ್ಸಾಗಿ ನಿಂತಿವೆ. ಈ ಇಸ್ತಿಹಾರ್ ಫಾಯಿಷಾದ ಲಾಗಾಯಿತು ಒಂದು ತಿಂಗಳಿನೊಳಗಾಗಿ ಅವುಗಳನ್ನ ಸಮ್ಮಂಧಪಟ್ಟವರು ಆಯಾ ಸಬ್ ರಿಜಿಸ್ಟ್ರಿ ಆಫೀಸುಗಳಲ್ಲಿ ವಾಪಸು ಪಡಿಯಬಹುದು. ಹಾಗೆ ತೆಗೆದುಕೊಳ್ಳುವದಕ್ಕೆ ತಪ್ಪಿದರೆ ಮೈಸೂರು ರಿಜಿಸ್ಟ್ರೇಷನ್ ರೆಗ್ಯುಲೇಷನ್ 85ನೆ ಸೆಕ್ಷನ್ ಅನುಸರಿಸಿ ಸದರಿ ದಸ್ತಾವೇಜುಗಳನ್ನು ನಾಶಪಡಿಸುತ್ತೇಂದು ಇದರಿಂದ ತಿಳಿಯಪಡಿಸಿದೆ:—

ನಂಬರು.	ಸಬ್ ರಿಜಿಸ್ಟ್ರಿ ಆಫೀಸಿನ ಹೆಸರು.	ರಿಜಿಸ್ಟ್ರಿ ಬುಕ್ಕಿನ ನಂ.	ದಸ್ತಾವೇಜಿನ ನಂ.	ದಸ್ತಾವೇಜನ್ನು ಬರೆದ ತಾರೀಖು.	ರಿಜಿಸ್ಟರು ಆಫೀಸಿನ ಸಿಬ್ಬಂದಿಯವರು ದಸ್ತಾವೇಜನ್ನು ನಿರಾಕರಿಸಿದ ತಾರೀಖು.	ಬರದುಕೊಟ್ಟವರ ಹೆಸರು ವಿಳಾಸ ಮತ್ತು ಗುರುತು.	ಬರಿಸಿಕೊಂಡವರ ಹೆಸರು ವಿಳಾಸ ಮತ್ತು ಗುರುತು.	ದಸ್ತಾವೇಜಿನ ಸ್ವಭಾವ.
1	ಚಿತ್ರದುರ್ಗ ...	I	493 / 1905—06	4-5-05	26-5-05	ಚಿತ್ರದುರ್ಗ ತಾಲ್ಲೂಕು ಇಸಾವುದ್ರದ ವಾಸಸ್ಥ ಸಂಗಪ್ಪ.	ಚಿತ್ರದುರ್ಗ ತಾಲ್ಲೂಕು ಇಸಾವುದ್ರದ ಕೊಟ್ರಪ್ಪ ಯಾನೆ ಪಟ್ಟದದೇವರು.	268 ರೂಪಾಯಿನ ಸ್ವಾಧೀನ ಅಡವು ಪತ್ರ.
2	ಹೊಳಲ್ಕೆರೆ ...	I	29 / 1906—07	22-7-06	24-7-06	ಹೊಳಲ್ಕೆರೆ ಜಡಿಯಪ್ಪನ ನಿಂಗಪ್ಪನ ಮಗ ಜಡಿಯಪ್ಪ.	ಹೊಳಲ್ಕೆರೆ ಜೋಯಿಸರ ವೆಂಕಟರಮಣಭಟ್ಟರ ಹೆಂಡತಿ ರಂಗಮ್ಮ.	50 ರೂಪಾಯಿನ ಗೇಣಿ ಕರಾರು.

ಡಿ. ಶ್ರೀನಿವಾಸೈಯ್ಯಂಗಾರ್,
ಫಾರ್ ಡಿಸ್ಟ್ರಿಕ್ಟ್ ರಿಜಿಸ್ಟ್ರಾರ್.

ಬೆಂಗಳೂರು ಸಬ್ ಜಡ್ಜ್‌ರವರ ಕೋರ್ಟಿನಲ್ಲಿ.

ಸ್ಟ 1908—09ನೆ ಇಸವಿ ಮಿ|| ಅರ್ಜೀ ನಂಬರ್ 619.

ಬೆಂಗಳೂರು ಗವೀಪುರದ ಗುಟ್ಟಹಳ್ಳೀಲಿದ್ದು ಛವತಿಪಟ್ಟ ತಿಮ್ಮಪ್ಪನ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ತಿಮ್ಮಯ್ಯ ಮೈನರ್, ಗಾರ್ಡಿಯರ್ ನರಸಮ್ಮ, ಮೃತಪಟ್ಟ ಸದರೀ ತಿಮ್ಮಪ್ಪನಿಗೆ ಖಾಸಾ ಮಗನು ಆಗ ಬೇಕೆಂಬ ಹಕ್ಕು ದಾರಿಮೇಲೆ ಬೆಂಗಳೂರು ವಾಸಸ್ಥರಾಗಿ ಮೃತಪಟ್ಟ ತಿಮ್ಮಪ್ಪನ ಜೆಂದಗಿ ಬಗ್ಯಾಗಿ ಬರತಕ್ಕ 146—0—0 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷ್ಯ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ತಿಮ್ಮಯ್ಯ ಮೈನರ್, ಗಾರ್ಡಿಯರ್ ನರಸಮ್ಮನ ಅರ್ಜಿಯನ್ನು ಸ್ಟ 1909ನೆ ಇಸವಿ ಜನವರಿ 29ನೆ ತಾರೀಖಿನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ತಿಮ್ಮಪ್ಪನ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ಟ 1909ನೆ ಇಸವಿ ಜನವರಿ ತಿಂಗಳು 11ನೆ ತಾರೀಖಿನಲ್ಲಿ ಕೋರ್ಟು ಮೊಹರಿನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಟಿ. ಇ. ಜಯರಾಂ ಐಯ್ಯರ್,
ಸಬ್ ಜಡ್ಜ್.